ಹಾಕ್ತಾರಲ್ಲ ಆ ಉಪ್ಪು ಈ ನೀರಿನಿಂದಲೇ ತೆಗೆಯೋದು' ಎಂದಳು. ಇಬ್ಬರಿಗೂ ಬೆರಗು. ಸಮುದ್ರ ನೀರಿನಿಂದ ಉಪ್ಪು ತೆಗೆದದ್ದು ಅಂಗಡಿಗೆ ಹೋಗಿ ಅಲ್ಲಿಂದ ಮನೆಗೆ ಹೇಗೆ ಬರುತ್ತದೆಯಲ್ಲಾ ಎಂದು ಮಾತನಾಡಿಕೊಂಡರು. ಅಷ್ಟರಲ್ಲಿ ಜಾನು ನೋಟಲ್ಲಿರುವ ಬೊಚ್ಚು ಬಾಯಿಯ ತಾತ ಈ ಉಪ್ಪಿಗೆ ಸತ್ಯಾಗ್ರಹ ಮಾಡಿದ್ದೂ ಹೇಳಿದಳು. ಚಿಮಾನದಲ್ಲಿ ಅವರು ಬಡ ಬಡ ನಡೀತಾ ಇದ್ರಲ್ಲ ಅದೇ ಅಂದಳು. ಸತ್ಯಾಗ್ರಹ ಅನ್ನುವ ಪದದ ಅರ್ಥ ಇಬ್ಬರಿಗೂ ತಿಳಿಯದೇ ಹೋಯ್ತು. 'ಇಷ್ಟು ದೊಡ್ಡ ಸಮುದ್ರದಲ್ಲಿ ಅದೆಷ್ಟು ಉಪ್ಪಿರಬಹುದು, ಅದ್ರೆ ಹೀಗೆ ತೆಗಿತಾ ಇದ್ರೆ ಖಾಲಿ ಆಗುದಿಲ್ವಾ?' ಎಂದು ಕೇಳಿದ ತಿಮ್ಮು. ಸ್ವಲ್ಪ ಯೋಚಿಸಿ'ನಂಗೂ ಗೊತ್ತಿಲ್ಲಾ, ಅದೆಲ್ಲ ಅಪ್ಪನ ಹತ್ರ ಕೇಳುವ'ಅಂದಳು ಜಾನು.

ಎಲ್ಲರೂ ಅದೆಷ್ಟು ಹೊತ್ತು ಆಟವಾಡಿದರೋ ತಿಳಿಯದು. ಸೂರ್ಯನ ಬಿಸಿಲು ಇಳಿಯುತ್ತಾ ಹೋಯಿತು. ಈಗ ಆಕಾಶ ಹಳದಿಯಿಂದ ಕೇಸರಿಗೆ ತಿರುಗಿತು. ಸೂರ್ಯ ಬಿಳಿಯಾಗಿ ಹೊಳೆಯುತ್ತಿದ್ದ. ನೋಡ ನೋಡುತ್ತಿದ್ದಂತೆ ಸೂರ್ಯ ಬಿಳಿಯಿಂದ ಕೆಂಪಾದ. ಮತ್ತೀಗ ಆಕಾಶ ಕೇಸರಿ, ಕೆಂಪಿನಿಂದ ಜನ್ನುವಿಗೆ ಹೆಸರು ಗೊತ್ತಿಲ್ಲದ ಬೇರೆ ಬೇರೆ ಬಣ್ಣಗಳಿಗೆ ತಿರುಗಿತು. ಸೂರ್ಯ ಸಮುದ್ರದಂಚಿಗೆ ಇಳಿಯಲು ಶುರು ಮಾಡಿದ. ಕಾಲಂಶ, ಅರ್ಧ, ಮುಕ್ಕಾಲು ಕೊನೆಗೆ ಪೂರ್ತಿಯಾಗಿ ಇಳಿದೇ ಬಿಟ್ಟ. ಆ ಕಡೆ ಹೋದವನು ಕಳಿಸಿದ್ದಾನೋ ಎಂಬ ಹಾಗೆ ಆ ಕಡೆಯಿಂದ ಒಂದು ಕಪ್ಪು ದೋಣಿ ಕಾಣಿಸಿಕೊಂಡಿತು. ಸೂರ್ಯ ಹೋದರೂ ಬೆಳಕು ಸಾಕಷ್ಟಿತ್ತು. ಆ ಕಪ್ಪು ದೋಣಿ ಬರುತ್ತಲೇ ಇತ್ತು, ಈವಾಗ ಬರುತ್ತೆ ಆವಾಗ ಬರುತ್ತೆ ಅಂತ ಜನ್ನು ತಿಮ್ಮು ಜಾನು ಮರಳಿನ ಮೇಲೆ ಕೂತು ಕಾದರೂ ಅದು ಬರಲಿಲ್ಲ. ಬೀಚಿನಲ್ಲಿ ಸಾಕಷ್ಟು ಜನರು ಬಂದು ಇವರಂತೆಯೇ ಆಟವಾಡುತ್ತಿದ್ದರು. ಮಕ್ಕಳು ಕಿರುಚುವ ಸದ್ದೂ ಕೆಲವೊಮ್ಮೆ ಹಗುರಕ್ಕೆ ಕೇಳುತ್ತಿತ್ತು.

'ನಾವೂ ಮರದ ದೊಡ್ಡ ಹಡಗು ಕಟ್ಟಿ, ಈ ಸಮುದ್ರದಲ್ಲಿ ಅದನ್ನು ಬಿಟ್ಟುಕೊಂಡು ಭೀಮಣ್ಣನ ಅಪ್ಪನನ್ನ ಹುಡುಕೋಕೆ ಹೋಗಲಿಕ್ಕಿದೆಯಲ್ಲಾ ತಿಮ್ಮು?' ಎಂದು ಅವರ ಪಟ್ಟಿಯಲ್ಲಿದ್ದ ಸಾಹಸವನ್ನು ನೆನಪಿಸಿದ ಜನ್ನು. ತಿಮ್ಮು ಮರೆತದನ್ನು ನೆನಪಿಸಿಕೊಂಡು ಹೌದು ಎಂದು ತಲೆಯಾಡಿಸಿ ನಕ್ಕ. ವಿಷ್ಣು ಚಿಕ್ಕಪ್ಪ ಪುಟ್ಟಿಯನ್ನೆತ್ತಿಕೊಂಡು ಅದೆಲ್ಲೋ ಹೋದವರು ಗಾಳಿಪಟವನ್ನೊಂದನ್ನು ತಂದಿದ್ದರು. ಬೀಸೋ ಗಾಳಿಯಲ್ಲಿ ಅದು ಆಕಾಶದಲ್ಲಿ ಹಾರುವುದನ್ನು ಮನದಣಿಯ ನೋಡಿದರು ಮಕ್ಕಳೆಲ್ಲಾ. ಅಳುತ್ತಿದ್ದ ಪುಟ್ಟಿ ಮುಖದಲ್ಲಿ ನಗುವೋ ನಗುವೀಗ. ಅಷ್ಟರಲ್ಲಿ ದೂರದಲ್ಲಿ ಬುಟ್ಟಿಯೊಂದನ್ನು ಹೊತ್ತುಕೊಂಡು ಚುರುಮುರಿ ಮಾರುವ ಮಾಮ ಬಂದರು. ಎಲ್ಲರಿಗೂ ಒಂದೊಂದು ಚುರುಮುರಿ ಮಾಡುವಂತೆ ಹೇಳಿದರು ಚಿಕ್ಕಪ್ಪ. ದೊಡ್ಡ ಸ್ಟೀಲ್ ಪಾತ್ರೆಯಲ್ಲಿ ಮಂಡಕ್ಕಿ, ಹೆಚ್ಚಿದ ನೀರುಳ್ಳಿ, ಖಾರಪುಡಿ, ಮಾವಿನ ತುರಿ, ಕ್ಯಾರೆಟ್ ತುರಿ, ತೆಂಗಿನೆಣ್ಣೆ ಎಲ್ಲಾ ಹಾಕಿ ಮಾಮ ಅದನ್ನೆಲ್ಲಾ ಸೌಟಿನಲ್ಲಿ ಚೆಂದಕ್ಕೆ ತಿರುಗಿಸಿ ಲಕೋಟೆಯಂತೆ ಕಟ್ಟಿದ ಕಾಗದಲ್ಲಿ ಹಾಕಿ ಕೊಟ್ಟರು. ಜನ್ನುವಿಗೆ ಖಾರವಾದ್ರೂ ರುಚಿಯೋ ರುಚಿ ಅನಿಸಿತು! ನೀರು ಕುಡಿಯುತ್ತಾ ಉಸ್ ಉಸ್ ಮಾಡುತ್ತಾ ಎರಡೆರಡು ಲಕೋಟೆ ಮಂಡಕ್ಕಿ ಸ್ವಾಹಾ ಮಾಡಿದ.

ಭಾಗೀರಥಿ ಪಿನ್ನಮ್ಮನಿಗೆ 'ಮನೆಯಲ್ಲಿ ಮೊಸರನ್ನ ಖಾರ ಈ ಶಿಂಗಣ್ಣನಿಗೆ' ಎಂದು ಹೇಳಿ ನಕ್ಕಿದ್ದು ಕಿವಿಗೆ ಬಿದ್ದರೂ ಕೇಳದವನಂತೆ ನಟಿಸಿದ ಜನ್ನು. ಪುಟ್ಟಿಗೆ ನೀರುಳ್ಳಿ, ಖಾರ ಹಾಕದ ಬಿಳಿ ಚುರುಮುರಿ. ತಿಂದಾದ ಮೇಲೆ ಜಾನು ಕಾಲನ್ನು ಇಟ್ಟು ಅದರ ಮೇಲೆ ಮರಳ ಮನೆ ಕಟ್ಟುವುದು ಹೇಳಿಕೊಟ್ಟಳು. ಎಲ್ಲರದೂ ಪುಟ್ಟ ಪುಟ್ಟ ಕಾಲುಗಳಾದದ್ದರಿಂದ ಪುಟ್ಟ ಪುಟ್ಟ ಮನೆ. ಪುಟ್ಟಿ ಗಡಿಬಿಡಿ ಮಾಡಿಕೊಂಡು ಅವಸರದಲ್ಲಿ ಕಾಲು ಎಳೆದುಕೊಂಡು ಅವಳ ಮನೆ ಬಿದ್ದೇ ಹೋಯ್ತು. ಅವಳು ಅಳುವ ಮೊದಲೇ ಚಿಕ್ಕಪ್ಪ ಅವರ ಕಾಲನಿಟ್ಟು ದೊಡ್ಡ ಮನೆ ಕಟ್ಟಿಕೊಟ್ಟರು.

ಬೆಳಕು ಪೂರ್ತಿ ಕಡಿಮೆಯಾಗುತ್ತಿದ್ದಂತೆ 'ಹೋಗುವಾ ಮಕ್ಕಳೇ' ಎಂದರು ಅಮ್ಮ. ಮನಸ್ಸಿಲ್ಲದಿದ್ದರೂ ವಾಪಾಸು ತಿರುಗಿ ನಡೆಯುವಾಗ ಮರಳು ಕಾಲಿಗೆ ಪೂರ್ತಿ ಅಂಟಿಕೊಂಡಿತು. ಜನ್ನು, ತಿಮ್ಮು ವಾಪಾಸು ತಿರುಗಿ ನೀರಲ್ಲಿ ಕಾಲು ತೊಳೆದುಕೊಂಡರೂ ಮತ್ತೆ ನಡೆಯುವಾಗ ಮತ್ತೆ ಅಂಟಿಕೊಳ್ಳುತ್ತಿತ್ತು. ಅದಕ್ಕೊಂದಿಷ್ಟು ಬಿದ್ದೂ ಬಿದ್ದೂ ನಕ್ಕರು. ಒದ್ದೆ ಬಟ್ಟೆಗಳು, ಮರಳು ಎಲ್ಲವನ್ನೂ ಹೊತ್ತುಕೊಂಡು ಕಾರಿನ ಹತ್ತಿರ ಬಂದಿದ್ದಾಯ್ತು. ಕಾರಲ್ಲಿಟ್ಟ ನೀರಲ್ಲಿ ಕೈಕಾಲು ತೊಳೆದರು ಎಲ್ಲರೂ. ಕೈ